ಭರಿಸಿ ಇರುವದ್ದರಿಂದ ಕಂಪೆನಿ ವೈಂಡಪ್ ಮಾಡಿಸಿ ಲಿಕ್ವಿಡೇಟರನ್ನು ಮೊಕರರ್ರಾಡಿಸಬೇಕೆಂದು ವಗೈರೆ ಅರ್ಜಿ ಕೊಟ್ಟಿರುವದ್ದರಿಂದ ಈ ಬಗ್ಯೆ ಸ॥ 1890ನೇ ಇಸವಿ ಫಿಬ್ರವರಿ ತಿಂಗಳು 25ನೇ ತಾರೀಖು ಮಂಗಳವಾರ ಹಿಯರಿಂಗ್ ಮೊಕರರ್ರಾಡಿಇಧೆ. ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟು ರೂಬರೂ ಆಕ್ಷೇಪಣೆ ಇರತಕ್ಕ ವರೆಲ್ಲರೂ ಅವರೇ ಆಗಲಿ ಅವರ ಕಡೆ ಅಡ್ವೋಕೇಟರೇ ಆಗಲಿ ಹಾಜರಾಗಿ ಆವರವರ ಆಕ್ಷೇಪಣೆಗಳನ್ನು ತಿಳಿಯಪಡಿಸಬಹುದು.

ತಾರೀಖು 23ನೇ ಮಾಹೆ ಜನವರಿ ಸ॥ 1890ನೇ ಇಸವಿ.

ಸ॥ 1890ನೇ ಇಸವಿ ಮಿಸಲೇನಿಯಸ್ ಪಿಟಿಷ್ನ ನಂಬರ್ 9.

ಅರ್ಜಿದಾರ್ರು—ನಂಜುಂಡಯ್ಯ ವಗೈರೇರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಶಿಡ್ಲಘಟ್ಟ ತಾಲ್ಲೂಕು ಕೈವಾರದಲ್ಲಿ ಇರುವ ಶ್ರೀ ಅಮರನಾರಾಯಣ ಸ್ವಾಮಿ ಭಕ್ತಪಾಲನ ಕೆಂಪೆನಿಗೆ ಸಂಬಂಧಪಟ್ಟ ಷೇರುದಾರ್ರು ಸನರೀ ಕಂಪೆನಿಯಿಂದ ಮೆಂಬರುಗಳಿಗೆ ಸಲ್ಲಬೇಕಾದ ಸಹಾಯದ್ದ ಪೊಬಲಗು ಸಲ್ಲದೆ ಕೆಂಪೆನಿ ಕೆಲಸಗಳೆಲ್ಲಾ ನಿಂತುಹೋಗಿ ಷೇರುದಾರ್ರಿಗೆಲ್ಲಾ ನಷ್ಟ ಸಂಭವಿಸಿ ಇರುವದ್ದರಿಂದ ಕಂಪೆನಿ ವೈಂಡಪ್ ಮಾಡಿಸಿ ಲಿಕ್ವಿಡೇಟರನ್ನ ಮೊಕರರ್ ಮಾಡಿಸಬೇಕೆಂದು ವಗೈರೆ ಅರ್ಜಿ ಕೊಟ್ಟಿರುವ ಕಾರಣ ಈ ಬಗ್ಯೆಸ॥ 1890ನೇ ಇಸವಿ ಫಿಬ್ರವರಿ ತಿಂಗಳು 25ನೇ ತಾರೀಖು ಮಂಗಳವಾರ ಹಿಯರಿಂಗ್ ಮೊಕರರ್ರಾಡಿಸಿ ಇಧೆ ಆ ತಾರೀಖು ದಿವಿ 11 ಘಂಟೆಗೆ ಆಕ್ಷೇಪಣೆ ಇರತಕ್ಕ ವರೆಲ್ಲರೂ ಅವರೇ ಆಗಲಿ ಅವರ ಕಡೆ ಅಡ್ವೋಕೇಟರೇ ಆಗಲಿ ಈ ಕೋರ್ಟು ರೂಬರೂ ಹಾಜರಾಗಿ ಅವರವರ ಆಕ್ಷೇಪಣೆಗಳನ್ನು ತಿಳಿಯಪಡಿಸಬಹುದು.

ತಾರೀಖು 23ನೇ ಜನವರಿ ಮಾಹೆ 1890.

ಹುಕುಂ ಬಮ್ಮೋಜೇಬ್,
ಎಸ್. ಆರ್. ಸುಬ್ಬರಾಯರ್,
ರೆಜಿಸ್ಟ್ರಾರ್.

ಫೈನಾರ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಪರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ಮೆಂಟಿನವರ ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳ ತಮ್ಮ ಡಿಬೆಂಚರ್‌ಗಳನ್ನು ಎಕ್ಷೇಸ್‌ಮೆಂಟ್ ಯಾನೇ ಪರಾ ಬಗ್ಯೆ ಇದರಡಿ ರುಜೂ ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಪ್ರೊಪ್ಪಿಕೇಟೂದ ಡಿವಾಂಡ್ ಡ್ರಾಫ್‌ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡಿರ್ಸ್,
ಕಾಂಪ್ಟ್ರೋಲರ್.

ಫಾರೆಸ್ಟ್ರಿ ಇಲಾಖಾ.

ತಾರೀಖು 21ನೇ ಜನವರೀ ಸ॥ 1890.

ಇದರಿಂದ ತಿಳಿಯಪಡಿಸುವಪೇನಂದರೆ, ಜನಗಳ ಅನುಕೂಲಕ್ಕೋಸ್ಕರ ರೈಲ್ವೇ ಸ್ಟೇಷನ್ ಇರುವ ಬೀರೂರಿನಲ್ಲಿ ಬಂದು ನಾಟಾಗಳ ಡಿಪೋ ಸ್ಥಾಪಿಸಲ್ಪಟ್ಟಿವ ಇಧೆ. ಅಲ್ಲಿ ನಾನಾ ತರಹಗಳ ನಾಟಾ ಮತ್ತು ಬೊಂಬುಗಳು ಚಿಲ್ಲರೆ ದರಕ್ಕೆ ಮಾರಲ್ಪಡುವವು.

ತಾರೀಖು 22ನೇ ಜನವರಿ 1890ನೇ ಇಸವಿ.

ಸ॥ 1878ನೇ ಇಸವಿ ಜೂ॥ 8ನೇ ಮರ್ಕುಮಿನ ಫಾರೆಸ್ಟ್ ರೂಲ್ಸ್ 13ನೇ ನಿಬಂಧನೆಗಳನ್ನನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ನಮೂದಾದ ಬೆಂಕಿಯಿಂದ ಕಾಪಾಡಲ್ಪಟ್ಟ ಬೆಂಗಳೂರು ಡಿಸ್ಟ್ರಿಕ್ಟು ಸರಕಾರಿ ಜಂಗಲಿಗಳನ್ನು ಮತ್ತು ಪ್ಲಾಂಟೇರ್ಷನ್‌ಗಳನ್ನು ಪ್ರಿಕಾಟಗಳಿಗೂ ಅಂಬುಗಾರ್ರು, ಯಾ ಬ್ಯಾಟೆಗಾರ್ರಿಗೂ ಬಂದ್ ಮಾಡಲ್ಪಟ್ಟಿವ ಯಿರುತ್ತೆ. ಯಾವ ಮನುಷ್ಯ ಅಥವಾ ಮನುಷ್ಯರುಗಳಾಗಲಿ ಇನ್‌ಚಾರ್ಜ್ ಫಾರೆಸ್ಟ್ ಆಫಿಸರು ಯಾ ಅಮಲೆದಾರ್ರವರ ಲಿಖಿತ ಮೂಲಕ ಅಪ್ಪಣೆ ಕೊಟ್ಟಾಯಿ ಬರ್ಜ್ ಜಂಗ್ಲಿಗಳಲ್ಲು ಮತ್ತು ಪ್ಲಾಂಟೇರ್ಷನ್‌ಗಳಲ್ಲು ನೇಲ್ಕಂಡ ಬ್ಯಾಟೆ ವಗೈರೆ ಬಗ್ಯೆ ಪ್ರವೇಶ ಮಾಡಕೂಡದು.

ನಂಬರ್.	ಫಾರೆಸ್ಟ್ ವ ಪ್ಲಾಂಟೇಷ್ಣ.		ತಾಲ್ಲೂಕು.
1	ಸಾವೆಂದುರ್ಗ	ಸ್ಟೇಟ್ ಫಾರೆಸ್ಟ್	ಮಾಗಡಿ
2	ಮಾಕಳಿ	ಡಿಟೋ	ಕ್ಲೋಸ್‌ಪೇಟೆ
3	ಮಣ್ಣುಗುಡ್ಡೆ	ಡಿಟೋ	ಡಿಟೋ
4	ಟೀಲಂದಾಡಿ	ಡಿಟೋ	ಕಾರ್ಕಾರ್‌ಹಳ್ಳಿ
5	ಬಸವನಬೆಟ್ಟ	ಡಿಟೋ	ಡಿಟೋ
6	ರಾಗಿಹಳ್ಳಿ	ಡಿಟೋ	ಡಿಟೋ
7	ಬಿಳಿಕಲ್	ಡಿಟೋ	ಡಿಟೋ
8	ಕುಂಬಳಗೂಡು	ಡಿಟೋ	ಕ್ಲೋಸ್‌ಪೇಟೆ
9	ಹುಳತಾರ್	ಡಿಟೋ	ಡಿಟೋ
10	ಹಂದಿಗುಂದಿ	ಡಿಟೋ	ಡಿಟೋ
11	ಕಬ್ಬಾಳ್	ಡಿಟೋ	ಕಾರ್ಕಾರ್‌ಹಳ್ಳಿ
12	ದೊಡ್ಡಬಳ್ಳಾಪುರ	ಡಿಟೋ	ದೊಡ್ಡಬಳ್ಳಾಪುರ
13	ಮುಗ್ಗುರು	ಡಿಟೋ	ಕಾರ್ಕಾರ್‌ಹಳ್ಳಿ
14	ಬಾಣಂತಿವಾರಿ	ಡಿಟೋ	ಡಿಟೋ
15	ತೆಂಗಿನಕಲ್	ಡಿಟೋ	ಕ್ಲೋಸ್‌ಪೇಟೆ
16	ಅರಕಾವತಿ	ಪ್ಲಾಂಟೇಷ್ಣ	ನೆಲವಂಗಲ
17	ಬೊಮ್ಮನಹಳ್ಳಿ ಬೈರಕಟ್ಟಹಳ್ಳಿ	ರೆವಿನ್ಯೂಪ್ಲಾಂಟೇಷ್ಣ	ಡಿಟೋ
18	ದೊಡ್ಡಬೆಲೆ	ಫಾರೆಸ್ಟ್ ಪ್ಲಾಂಟೇಷ್ಣ	ಡಿಟೋ
19	ಮುದಗೆರೆ	ಪ್ಲಾಂಟೇಷ್ಣ	ಕ್ಲೋಸ್‌ಪೇಟೆ
20	ವೃಷಭಾವತಿ	ಡಿಟೋ	ಬೆಂಗಳೂರು

ಪ್ರತಿ ವರುಷ ಬಿಸಲುಕಾಲ ಅಂದರೆ ಫಿಬ್ರವರಿ ಗುರ್ಯೇ ಲಾಗಾಯತು ಮೇ 31ರ ವರಿಗೆ ಮೇಲ್ಕಂಡ ಅಪ್ಪಣೆ ಕೊಡಲ್ಪಡುವದಿಲ್ಲವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1890ನೇ ಇಸವಿ ಅರ್ಜೀ ನಂಬರ್ 14.

ಬೆಂಗಳೂರು ಮಾವಹಳ್ಳಿಲಿ ಯಿದ್ದು ಮೃತಪಟ್ಟ ನರಸುಂಹ್ಮಣ್ಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಹನುಮಪ್ಪ, ಮೃತಪಟ್ಟ ಸದರೀ ನರಸುಂಹ್ಮಣ್ಣನಿಗೆ ಅಂಣ ಆಗಬೇಕೆಂಬ ಹಕ್ಕುದಾರಿ ಮೇಲೆ ಮಾವಹಳ್ಳಿ ಸ್ಥಳದ ಹನುಮಪ್ಪನು ಮಾವಹಳ್ಳಿ ವಾಸಸ್ಥನಾಗಿ ಮೃತಪಟ್ಟ ನರಸುಂಹ್ಮಣ್ಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಹನುಮಪ್ಪನ ಅರ್ಜಿಯನ್ನು 1890ನೇ ಇಸವಿ ಫಿಬ್ರವರಿ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಸುಂಹ್ಮಣ್ಣನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಜನವರೀ ತಿಂಗಳು 24ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಲ್. ಅನಂತಸ್ವಾಮಿರಾವ್,
ಸಬ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟ್

ತಾಂ|| 21ನೇ ಜನವರಿ 1890.

ಇದರಿಂದ ಸಕಲ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ್ ಸ್ 1878ನೇ ಇಸವಿ ಜೂ|| 8ನೇ ತಾರೀಖಿನ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಿಸಿ ಇರುವ ಫಾರೆಸ್ಟ್ ಮತ್ತು ಪ್ಲಾಂಟೇಷ್ಣಗಳು 1890ನೇ ಇಸವಿ ಫಿಬ್ರವರಿ ಗುರ್ಯೇ ಲಾಗಾಯತು ಜೂ|| ಆಖೈರ್ ವರಿಗಿನ ಬಿಸಲು ಕಾಲದಲ್ಲಿ ಬಂದ್ ಮಾಡಲ್ಪಟ್ಟಿರುತ್ತದೆ.

2. ಈ ಮೇಲ್ಕಂಡ ಅಯಾಮಿನಲ್ಲಿ ಯಾವ ವಿಧವಾದ ಸಿಕಾರಿಯೂ ನಿರೋಧಿಸಲ್ಪಟ್ಟಿರುತ್ತದೆ. ಅತಿಕ್ರಮಪ್ರವೇಶ ಮಾಡುವವರು ಪೊಸಿಕ್ಯೂಷ್ಣಗೆ ಒಳಪಟ್ಟಾರು

3. ಫಾರೆಸ್ಟ್ ಮತ್ತು ಪ್ಲಾಂಟೇಷ್ಣಗಳಲ್ಲಿ ಈಗ ದನಗಳು ಮೇಯಿಸುವದಕ್ಕೆ ಅಪ್ಪಣೆ ಪಡದಿರತಕ್ಕಂತ ರೈತರುಗಳು ಹುಲ್ಲಿಗೆ ಬೆಂಕಿ ಹಾಕುವದನ್ನ ನಿರೋಧಿಸಿ ಇರುವದಲ್ಲದೆ ಫಾರೆಸ್ಟ್ ವ ಪ್ಲಾಂಟೇಷ್ಣಗಳಲ್ಲಿ ಬೆಂಕಿ ಬೀಳುವದನ್ನ ಅಡ್ಡಿ ಪಡಿಸುವದಕ್ಕು ಮತ್ತು ಆರಿಸುವದಕ್ಕು ಸಹ ತಕ್ಕ ಕುಮ್ಮಕ್ಕು ಕೊಡಬೇಕು